ಅಧ್ಯಕ್ಷರು: ಆ ವಿಷಯವನ್ನು ಶೂನ್ಯ ವೇಳೆಯಲ್ಲಿ ನೋಡೋಣ. ರೂಲ್ಸ್ ಪ್ರಕಾರ ಇಲ್ಲದಿದ್ದರೆ ನಾನು ಹೇಗೆ ಅಲೊ ಮಾಡಲು ಬರುತ್ತದೆ. ಬಹಳ ಜನರು ಪ್ರಶ್ನೆಯನ್ನು ಕಳುಹಿಸಿದ್ದಾರೆ. ಇವತ್ತು ಅದು ಮುಂದಕ್ಕೆ ಹೋದರೆ ತೊಂದರೆಯಾಗುತ್ತದೆ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೆ, ನಮಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು: ಮಾನ್ಯ ನೀಲಕಂಠಪ್ಪನವರೇ ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆ ಆದ ನಂತರ ಜೀರೋ ಹವರ್‌ನಲ್ಲಿ ಅವಕಾಶ ಕೊಡುತ್ತೇನೆ.

ಪ್ರಶ್ನೋತ್ತರಗಳು

1 (ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಚಿಂತಾಮಣಿ ನಗರದ ರಸ್ತೆಗಳು.

61(೫೮೭)

ಶ್ರೀ ಚೌಡರೆಡ್ಡಿ(ಚಿಂತಾಮಣಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಚಿಂತಾಮಣಿ ನಗರ ವ್ಯಾಪ್ತಿಯಲ್ಲಿ ಇರುವ ರಸ್ತೆಗಳು ಎಷ್ಟು? ಎಷ್ಟು ಕಿಮೀ ಉದ್ದ ಇವೆ: ಎಷ್ಟು ಕಿಮೀ ರಸ್ತೆಗಳು ದುರಸ್ತಿಯಲ್ಲಿವೆ: ಎಷ್ಟು ಕಿಮೀ ರಸ್ತೆಗಳು ದುಸ್ಥಿತಿಯಲ್ಲಿವೆ: ಎಷ್ಟು ಕಿಮೀ ರಸ್ತೆಗಳಿಗೆ ಡಾಂಬರು ಮಾಡಲಾಗಿದೆ (ಚಾಲ್ತಿ ಸಾಲಿನ ಯೋಜನೆಗಳು ಮತ್ತು ಹಣಕಾಸು ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

೧. ಚಿಂತಾಮಣಿ ನಗರ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳು ಮೂರು:

ಚಿಂತಾಮಣಿ ಚೆನ್ನಸಂದ್ರ ರಸ್ತೆ.

ಚಿಂತಾಮಣಿ ಚೇಳೂರು ರಸ್ತೆ ಹಾಗೂ ರಾಜ್ಯ ಹೆದ್ದರಿ ೫೮ (ಎಂ.ಜಿ.ರಸ್ತೆ). ದುರಸ್ತಿಯಾಗುವ ಹಾಗೂ ದುಸ್ಥಿತಿಯಲ್ಲಿರುವ ರಸ್ತೆಗಳು ಯಾವುದೂ ಇರುವುದಿಲ್ಲ.

ಪೂರ್ಣವಾಗಿ ರಸ್ತೆ ಡಾಂಬರೀಕರಣ ಮಾಡಲಾಗಿದೆ. ೨೦೦೦-೦೧ನೇ ಸಾಲಿನಲ್ಲಿ ಈ ಯೋಜನೆಗೆ ರೂ.೮.೭೫ ಲಕ್ಷಗಳು ವೆಚ್ಚವಾಗಿರುತ್ತದೆ.

ಶ್ರೀ ಚೌಡರೆಡ್ಡಿ: ಮಾನ್ಯ ಅಧ್ಯಕ್ಷರೆ, ಸರ್ಕಾರದವರು ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಿದ್ದಾರೆ. ಉತ್ತರದಲ್ಲಿ ೨೦೦೦-೦೧ನೇ ಸಾಲಿನಲ್ಲಿ ಈ ಯೋಜನೆಗೆ ರೂಪಾಯಿ ೮.೭೫ ಲಕ್ಷಗಳು ರೋಡುಗಳನ್ನು ಸರಿಪಡಿಸಲು ವೆಚ್ಚವಾಗಿರುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅಲ್ಲಿ ಏನಾಗಿದೆ ಅಂದರೆ, ನಮ್ಮ ಚಿಂತಾಮಣಿ ತಾಲ್ಲೂಕಿನಲ್ಲಿ ಬಿಸಿನೆಸ್ ಜಾಸ್ತಿ, ಅಲ್ಲಿ ಈ ಕಡೆ ಆ ಕಡೆ ಜಾಸ್ತಿ ಬಿಲ್ಡಿಂಗ್ಸ್ ಬಂದಿರುವುದರಿಂದ ರೋಡುಗಳ ಸೆಂಟ್ರಲ್‌ನಲ್ಲಿ ನೀರು ನಿಂತು ಹೋಗುತ್ತದೆ. ಅದಕ್ಕೋಸ್ಕರವಾಗಿ ನಾನು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ ತಾವು ಮೊದಲು ಡ್ರೈನ್ಸ್ ಮಾಡದೇ ಇದ್ದರೆ ಉಪಯೋಗವಿಲ್ಲ. ಇವತ್ತು ಇಷ್ಟು ದುಡ್ಡು ಖರ್ಚು ಮಾಡಿದರೂ ಮಧ್ಯೆ ಮಧ್ಯೆ ರೋಡುಗಳಲ್ಲಿ ಗುಂಡಿ ಬಿದ್ದಿವೆ, ಮಳೆ ಬಂದರೆ ಡ್ರೈನ್ಸ್ ಇಲ್ಲದೇ ಇರುವುದರಿಂದ ನೀರು ಅಲ್ಲಲ್ಲಿ ನಿಂತು ಹೋಗುತ್ತದೆ. ಇವತ್ತು ಬಹಳ ಕಡೆ ರೋಡ್ ಹಾಳಾಗಿವೆ. ನೀವು ಇಷ್ಟು ದುಡ್ಡು ಖರ್ಚು ಮಾಡಿದರೂ ವೇಸ್ಟ್ ಆಗುತ್ತಾ ಇದೆ. ತಾವು ದಯವಿಟ್ಟು ಡ್ರೈನ್ಸ್ ಮಾಡಬೇಕು. ಅಲ್ಲಿ ಇಲ್ಲಿ ಸ್ವಲ್ಪ ಟಾರ್ ಎದ್ದು ಹೋಗಿರುವುದರಿಂದ ಹೆಚ್ಚು ತೊಂದರೆ ಆಗಿದೆ, ಅಲ್ಲಿ ಡಾಂಬರೀಕರಣ ಮಾಡಿಸಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ೮.೭೫ ಲಕ್ಷ ರೂಪಾಯಿಗಳನ್ನು ಅವರ ಕ್ಷೇತ್ರದಲ್ಲಿ ನಗರಸಭೆ ಆವರಣದಲ್ಲಿರತಕ್ಕ ರಸ್ತೆಗೆ ಖರ್ಚು ಮಾಡಿದ್ದೇವೆ. ಇವತ್ತು ಎಲ್ಲಾ ಕಡೆ ಡ್ರೈನ್ಸ್ ಮಾಡೇ ರಸ್ತೆಗಳನ್ನು ಮಾಡಬೇಕೆಂದು ಹೊಸ ಆದೇಶವನ್ನು ಕೊಟ್ಟಿದ್ದೇವೆ. ಏಕೆಂದರೆ ನಾವು ರೋಡ್ ಪಕ್ಕಾ ಮಾಡಿ ಡಾಂಬರೀಕರಣ ಮಾಡಿದ ಮೇಲೆ ಮತ್ತೆ ನೀರು ಬಂದರೆ ರಸ್ತೆ ಹಾಳಾಗುತ್ತದೆ. ಅದರ ಬಗ್ಗೆ ಗಮನ ತೆಗೆದುಕೊಳ್ಳುತ್ತೇವೆ ಮತ್ತು ನಾನ್ ಪ್ಲಾನ್‌ನಲ್ಲಿ ೩೦ /೫ಳರಲ್ಲಿ ಒಂದೇ ವರ್ಗದಲ್ಲಿ ನಾವು ೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಹಳೆಯ ರಸ್ತೆಗಳ ಮರು ಡಾಂಬರೀಕರಣ.